ಸಾಕ್ಷಿಯನ್ನು ದಿಃ 18-10-2019 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ ಸಿ.ಡಿ.ಹೆಚ್ ಪರ ಶ್ರೀ ಎಮ್.ಎನ್.ಎ ವಕೀಲರಿಂದಃ

ಪ್ರಮಾಣ ಪತ್ರ ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ವಾದಿಯು ನನಗೆ ನೋಟೀಸಿನ ನೀಡಿದ್ದನು ಎಂದರೆ ಸರಿ. ಸದರಿ ನೋಟೀಸಿನ ಮಾಹಿತಿ ನನಗೆ ಗೊತ್ತು ಎಂದರೆ ಸರಿ. ನಾನು ವಾದಿಗೆ ನಿಪಿ-2 ನ್ನು ಬರೆದು ಕೊಟ್ಟಿರುವುದಿಲ್ಲ. ನಿಪಿ-2 ರಲ್ಲಿ ಇರುವಂತಹ ರುಜು ನನ್ನ ರುಜು ಎಂದರೆ ಸರಿಯಲ್ಲ. ನಿಪಿ-2 ನ್ನು ದಿಃ 16.04.2016 ರಂದು ಸದರಿ ದಾಖಲೆಯಲಿಲ ರುಜು ಮಾಡಿರುಂತಹ ಸಾಕ್ಷಿದಾರರ ಸಮಕ್ಷಮೇ ಅದನ್ನು ಬರೆದು ರುಜು ಮಾಡಿ ಕೂಟ್ಟಿರುತ್ತೇಃನೆ ಎಂದರೆ ಸರಿಯಲ್ಲ. ನಿಪಿ-2 ಕ್ಕೆ ನಾನೇ ಸ್ವತಃ ಸಾಕ್ಷಿದಾರರಸಮಕೆಮ ರುಜು ಮಾಡಿದ್ದರೂ ಸಹ ಉದ್ದೇಶಪೂರ್ವಕವಾಗಿ ರುಜು ಮಾಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದೆದೇನೆ ಎಂದರೆಸ ರಿಯಲ್ಲ.

ನಾನು ವೃತ್ತಿಯಿಂದ ಪೆಟ್ರೋಲ ಬಂಕನ್ನು ನಡೆಸುತ್ತೇನೆ. ಹಾಗೂ ಸಿವಿಲ್ ಗುತ್ತಿಗೆದಾರರನಿರುತ್ತೇನೆ. ಸಿವಿಲ್ ಗುತ್ತಿಗೆ ದಾರ ಪರವಾನಿಗೆ ಟಿನ್ ನಂಬರು ಬೇಕಾಗುತ್ತದೆ. ನಾನು ಟಿನ್ ನಂಬರನ್ನು ಹೊಂದಿರುತ್ತೇಃನೆ. ನಾನು ಪಾನ್ ಕಾರ್ಡನ್ನು ಹೊಂದಿರುತ್ತೇನೆ. ಸಿವಿಲ್ ಗುತ್ತಿಗೆದಾರರು ಪ್ರತಿ ವರ್ಷ ಆದಾಯ ತೆರಿಗೆ ಮತ್ತು ವಾಣಿಜ್ಯ ತೆರಿಗೆಯನ್ನು ಪಾವತಿಸಬೇಕಾಗುತ್ತದೆ ಎಂದರೆ ಸರಿ. 2013 ರಿಂದ 2016 ರವರೆಗೂ ನಾನು ಆದಾಯ ತೆರಿಗೆ ಪಾವತಿಸಿರುತ್ತೇನೆ. 2013 ರಿಂದ 2016 ವರೆಗೂ ಎಷ್ಟು ಆದಾಯ ಬಂದಿರುತ್ತದೆ ಎನ್ನುವ ದಾಖಲೆಯನ್ನು ಇಟ್ಟಿರುತ್ತೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ. ನಾನು ಸ್ಟೆಟ್ ಬ್ಯಾಂಕ ಎಸ್.ಬಿ.ಐ ಖಾತೆಯನ್ನು

ಹೊಂದಿರುತ್ತೇನೆ. ಸದರಿ ಬ್ಯಾಂಕಿನಲ್ಲಿ ನಾನು ಸಾಲವನ್ನು ಪಡೆದುಕೊಂಡಿರುತ್ತೇನೆ. ಸರಿ ಬ್ಯಾಂಕನ್ನು ಹೊರತುಪಡಿಸಿ ಬೇರೇ ಎಲ್ಲಯೂ ಸಹ ನಾನು ಸಾಲವನ್ನು ಪಡೆದುಕೊಂಡಿಲ್ಲ.

ನಾನು ಹೆಚ್ ಡಿ ಎಫ್ ಸಿ ಬ್ಯಾಂಕಿನಲ್ಲಿ ಸಾಲವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಸದರಿ ಬ್ಯಾಂಕಿಗೆ ಸಾಲವನ್ನು ಪಡೆಯುವ ಸಂದರ್ಭದಲ್ಲಿ ಬರೆದುಕೊಟ್ಟಂತಹ ದಾಖಲೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಅಭಿಮುಖವಾಗಿ ನಿಪಿ-7 , 8 ಮತ್ತು 9 ಎಂದು ಗುರುತಿಸಲಾಯಿತು.

ವಾದಿಯು ನನಗೆ ನೀಡಿದ ನೋಟಿಸಿಗೆ ಪ್ರತ್ಯುತ್ತರವನ್ನು ನೀಡಲು ನಾನೇ ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ವಾದಿಗೆ ನಾನು ದಿಃ 16.04.2016 ರಂದು ದಾವಾ ಸ್ವತ್ತನ್ನು 30 ಲಕ್ಷಗಳಿಗೆ ಮಾರಾಟ ಮಾಡಲು ಒಪ್ಪಿ ಅದೇ ದಿನ ಸಾಕ್ಷಿದಾರರ ಸಮಕ್ಷಮ ರೂ. 21,40,500/- ಹಣವನ್ನು ಪಡೆದುಕೊಂಡು ನಿಪಿ-2 ನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಸರ್ವೇ ನಂ. 414/2 ಜಮೀನನ್ನು ದಿಃ 10.02.2017 ರಲ್ಲಿ ನಾನೇ ಮಾರಾಟ ಮಾಡಿದ್ದೇನೆ ಸಾಕ್ಷಿಯು ನಾನು ಮತ್ತು ನನ್ನ ಸಹೋದರ ಜಂಟಿಯಾಗಿ ಮಾರಾಟ ಮಾಡಿದ್ದೇವೆ ಎಂದು ನುಡಿಯುತ್ತಾರೆ. ನನ್ನ ಮತ್ತು ನನ್ನ ಸಹೋದರನ ಮಧ್ಯೆ ಪಾಲು ವಿಭಾಗವಾಗಿರುವುದಿಲ್ಲ. ಇದೇ ನ್ಯಾಯಾಲಯದಲ್ಲಿ ನನ್ನ ಸಹೋದರಿ ನಮ್ಮ ವಿರುದ್ದ ಒ ಎಸ್ ನಂ. 86/2018 ದಾವೆಯನ್ನು ಪಾಲು ವಿಭಾಗಕ್ಕಾಗಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಅ ದಾವೆಯಲ್ಲಿಯ ಪ್ರತಿವಾದ ಪತ್ರದಲ್ಲಿ ನಮ್ಮ ಕುಟುಂಬದ ಜಮೀನುಗಳನ್ನು 2011 ರಲ್ಲಿಯೇ ಪಾಲು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ಹೇಳಿರುತ್ತೇನೆ ಎಂದರೆಸರಿ .

ಈ ದಾವಾ ಸ್ವತ್ತು ನನ್ನ ಸ್ವಯಾರ್ಜಿತ ಸ್ವತ್ತು ಎಂದರೆ ಸಾಕ್ಷಿಯು ಇಲ್ಲ ನನ್ನ ತಂದೆಯ ಸ್ವತ್ತು ಎಂದು ನುಡಿ ಯುತ್ತಾರೆ. ನಿಪಿ-6 ರಂತೆ ಸರ್ವೇ ನಂ. 414/2 ವಿಸ್ತೀರ್ಣ 8 ಎಕರೆ ಜಮೀನನ್ನು 16 ಲಕ್ಷಕ್ಕೆ ಮರಾಟ ಮಾಡಿರುತ್ತೇವೆ ಎಂದರೆ ಸರಿ. ಅದರಲ್ಲಯ ನನ್ನ ಸಹಿಯನ್ನು ಬೇರೇ ಬೇರೇ ರೀತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ನೀಡಿದ ನೋಟಿಸಿನ ನಂತರ ಅವರ ವಿರುದ್ಧ ಪ್ರಕರಣವನ್ನು ದಾಖಲಿಸಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ವಾದಿಯ ಸಾಕ್ಷಾ ವಿಚಾರಣೆ ಮುಗಿದ ನಂತರ ವಾದಿಯ ವಿರುದ್ಧ ನರಗುಂದ ನ್ಯಾಯಾಲಯದಲ್ಲಿ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ನೋಟಿಸಿಗೆ ಪ್ರತ್ತ್ಯುತ್ತರವನ್ನು ನೀಡಿದ ನಂತರ ನಾನು ಅನಾರೋಗ್ಯದಿಂದ ಬಳಲುತ್ತಾ ಇದುದರಿಂದ ತಕ್ಷಣ ಅವರ ವಿರುದ್ಧ ಕ್ರಿಮಿನಲ್ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ನಾನು ಅನಾರೋಗ್ಯದಿಂದ ಬಳಲುತ್ತಾ ಇದ್ದನು ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿಲ್ಲ. ನಾನು ಅನಾರೋಗ್ಯದಿಂದ ಬಳಲುತ್ತಾ ಇದ್ದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿಯ ಸುರೇಶ ಪವಾರ ಇವರ ಪರಿಚಯವಿರುತ್ತದೆ. ಸದರಿಯವರು ನಿಪಿ-ಕ್ಕೆ ರುಜು ಮಾಡಿರುತ್ತಾರೆ ಎಂದರೆ ಸರಿ. 5 ಜನ ಸಾಕ್ಷಿದಾರ ಸಮಕ್ಷಮ ವಾದಿಯ ಹೆಸರಿಗೆ ನಿಪಿ*-2 ನ್ನು ಬರೆದುಕೊಟ್ಟಿದರು ಸಹ ಬರೆದುಕೊಟ್ಟಿಲ್ಲ ಎಂದು ಸುಳುಳ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗೃಹ ಕೃತ್ಯದ ಅಡಚಣೆಯ ಸಲುವಾಗಿ ಹೆಚ್ ಡಿ ಎಫ್ ಸಿ, ಎಸ್ ಬಿ ಐ ಮತ್ತು ಒ ಎಸ್ ಎಸ್ ಬ್ಯಾಂಕುಗಳಲಿಲ ಸಾಲವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಹೆಚ್ ಡಿ ಎಫ್ ಸಿ ಬ್ಯಾಂಕಿಗೆ ದಾವಾ ಸ್ವತ್ತುನ್ನು ಮತ್ತು ಇತರೆ ಸ್ವತ್ತುಗಳನ್ನು ಅಡಮಾನು ಮಾಡಿರುತ್ತೇನೆ ಎಂದರೆ ಸರಿ. ಹೆಚ್ ಡಿ ಎಫ್ ಸಿ ಬ್ಯಾಂಕಿನ ಸಾಲವನ್ನು ಮರು ಪಾವತಿ ಮಾಡಿ ಶುದ್ಧ ಕ್ರ ಯ ಪತ್ರ ವನ್ನು

ಬರೆದುಕೊಡುತ್ತೇನೆ ಎಂದು  ಒಪ್ಪಿ ಕೊಡಿಂದೆದನು ಎಂದರೆ ಸರಿಯಲ್ಲ. ಹೆಚ್ ಡಿ ಎಫ್ ಸಿ ಬ್ಯಾಂಕಿನ ಸಾಲದ ತಿರುವಳಿಗಾಗಿ ದಾವಾ ಸ್ವತ್ತನ್ನು ವಾದಿಗೆ ರೂ. 30,00,000/- ಕ್ಕೆ ಮಾರಾಟ ಮಾಡಿದೆನು ಎಂದರೆ ಸರಿಯಲ್ಲ. ವಾದಿಯು ಈ ದಿನದ ವರೆಗೂ ಬಾಕಿ ಹಣವನ್ನು ಪಾವತಿಸಿ ಶುದ್ಧ ಕ್ರಯ ಪತ್ರ ಬರೆಯಿಸಿಕೊಳ್ಳಲು ಸಿದ್ಧನಿರುತ್ತಾನೆ ಎಂದರೆ ಸರಿಯಲ್ಲ

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೊಡಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಹಿ: 18.10.2019

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಗದಗ